ಹಾವೇರಿ ತಾಲ್ಲೂಕಿನಲ್ಲಿ ನಳದ ನೀರಿನ ಯೋಜನೆ

೧೮೭೫. ಶ್ರೀ ಸಿ. ಸಿ. ಕಲಕೋಟಿ (ಹಾವೇರಿ).— ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ?

ಅ) ಹಾವೇರಿ ತಾಲ್ಲೂಕಿನ ನೆಗಳೂರು ಕರುಬಗೊಂಡ, ಯಲಗಟ್ಟ, ಕಬ್ಬೂರ, ಹೊಸರಿತ್ತಿ, ಗ್ರಾಮಗಳಿಗೆ ನಳದ ನೀರಿನ ಯೋಜನೆಯನ್ನು ಕೈಗೊಳ್ಳಲಾಗುವುದೆ ?

ಆ) ಹಾಗಿದ್ದರೆ ಸದರೀ ಯೋಜನೆಯು ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ಅಬ್ದುಲ್‌ನಜೀರ್‌ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಚಿವರು).—

ಅ) ನೆಗಳೂರು ಕರುಬಗೊಂಡ, ಮತ್ತು ಯಲಗಟ್ಟ ಗ್ರಾಮಗಳ ನಳದ ನೀರು ಯೋಜನೆಗಳು ೧೯೮೫-೮೬ ರ ಆಯವ್ಯಯ ಪಟ್ಟಿಯಲ್ಲಿ ಸೇರಿದ್ದು, ಈ ಯೋಜನೆಗಳನ್ನು ಕೈಗೊಳ್ಳಲಾಗುತ್ತಿದೆ.

ಕಬ್ಬೂರು ಮತ್ತು ಹೊಸರಿತ್ತಿ ಗ್ರಾಮಗಳ ಯೋಜನೆಗಳು ೧೯೮೫-೮೬ನೇ ಸಾಲಿನ ಹೊಸ ನಳದ ನೀರಿನ ಯೋಜನೆ ಪಟ್ಟಿಯಲ್ಲಿ ಸೇರಿದ್ದು ಪರಿಶೀಲನೆಯಲ್ಲಿವೆ.

ಆ) ನೆಗಳೂರು ಮತ್ತು ಕರುಬಗೊಂಡ ಗ್ರಾಮದ ಯೋಜನೆಗಳ ಕಾಮಗಾರಿ ಈಗಾಗಲೇ ಪ್ರಾರಂಭವಾಗಿದೆ ಯಲಗಟ್ಟ ಗ್ರಾಮದ ಯೋಜನೆಯನ್ನು ಶೀಘ್ರದಲ್ಲೇ ಪ್ರಾರಂಭಿಸಲಾಗುವುದು.

ಹಾವೇರಿ ತಾಲ್ಲೂಕಿನಲ್ಲಿ ಇರುವ ತೋಟಗಾರಿಕೆ ಕೇಂದ್ರಗಳು

೧೮೭೬. ಶ್ರೀ ಸಿ. ಸಿ. ಕಲಕೋಟಿ (ಹಾವೇರಿ).— ಮಾನ್ಯ ತೋಟಗಾರಿಕೆಯ ರಾಜ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ಹಾವೇರಿ ತಾಲ್ಲೂಕಿನಲ್ಲಿ ತೋಟಗಾರಿಕೆ ಇಲಾಖೆಯಿಂದ ನಡೆಸುತ್ತಿರುವ ಕೇಂದ್ರಗಳ ಸಂಖ್ಯೆ ಎಷ್ಟು ?

ಆ) ಹೊಸ ಕೇಂದ್ರಗಳನ್ನು ಪ್ರಾರಂಭಿಸಲು ಸರ್ಕಾರದವರು ಕ್ರಮ ತೆಗೆದುಕೊಳ್ಳುವರೆ ? ಹಾಗಿದ್ದಲ್ಲಿ ಎಲ್ಲಿ ಪ್ರಾರಂಭ ಮಾಡಲು ಉದ್ದೇಶಿಸಲಾಗಿದೆ ?

ಶ್ರೀ ಸಿದ್ಧರಾಮಯ್ಯ (ತೋಟಗಾರಿಕೆ ರಾಜ್ಯ ಸಚಿವರು).—

ಅ) ಎರಡು (೨)

ಆ) ಹೊಸ ಕೇಂದ್ರಗಳನ್ನು ಪ್ರಾರಂಭಿಸುವ ಆಲೋಚನೆ ಸರ್ಕಾರದ ಮುಂದೆ ಇಲ್ಲ.

ಕಿರಿಯ ಕಾಲೇಜು ಉಪನ್ಯಾಸಕರ ಶಿಕ್ಷಕರ ನೇಮಕಾತಿ ಬಗ್ಗೆ

೭೭೨. ಶ್ರೀ ಪ್ರತಾಪಚಂದ್ರಶೆಟ್ಟಿ (ಕುಂದಾಪುರ).— ಮಾನ್ಯ ಶಿಕ್ಷಣ ಸಚಿವರು ದಯೆಯಿಟ್ಟು ಈ ವಿಷಯಗಳನ್ನು ತಿಳಿಸುವರೆ ?

ಅ) ಕುಂದಾಪುರ ತಾಲೂಕು ಗೋಳಿಯಂಗಡಿಯ ಸರಕಾರಿ ಕಿರಿಯ ಕಾಲೇಜಿನಲ್ಲಿ ವಿದ್ಯಾರ್ಥಿ-ವಿದ್ಯಾರ್ಥಿನಿಯರ ಸಂಖ್ಯೆ ಎಷ್ಟು ?

ಆ) ಮಂಜೂರಾದ ಉಪನ್ಯಾಸಕರ ಸಂಖ್ಯೆ ಎಷ್ಟು ಹಾಗೂ ಕೊರತೆಯಿರುವ ಉಪನ್ಯಾಸಕರ ಸಂಖ್ಯೆ ಎಷ್ಟು ?

ಇ) ತರಗತಿಯ ಆಯಾ ವಿಷಯಗಳಿಗನುಸಾರವಾಗಿ ಉಪನ್ಯಾಸಕರ ನೇಮಕಾತಿ ಆಗಿದೆಯೇ ?

ಶ್ರೀ ಎಂ. ರಘುಪತಿ (ಶಿಕ್ಷಣ ಸಚಿವರು).—

ಅ) ವಿದ್ಯಾರ್ಥಿಗಳು.—

ಪಿ.ಯು.ಸಿ.—೧	...	೧೬
ಪಿ.ಯು.ಸಿ.—೨	...	೧೦
ವಿದ್ಯಾರ್ಥಿನಿಯರುಗಳು.—		
ಪಿ.ಯು.ಸಿ.—೧	...	೧೧
ಪಿ.ಯು.ಸಿ.—೨	...	೧೧
ಒಟ್ಟು		೪೮

ಆ) (೧) ಮಂಜೂರಾದ ಉಪನ್ಯಾಸಕರ ಸಂಖ್ಯೆ. ೭.

(೨) ಕೊರತೆಯಿರುವ ಉಪನ್ಯಾಸಕರ ಸಂಖ್ಯೆ. ೧. (ಆಂಗ್ಲ ಭಾಷಾ ಉಪನ್ಯಾಸಕರ ಹುದ್ದೆ).

ಇ) ಹೌದು.

ಮಂದ್ದೇನ ಹಳ್ಳಿ ಅಭಿವೃದ್ಧಿ ಬಗ್ಗೆ

೧೭೭೩. ಶ್ರೀ ಕೆ. ಎಂ. ಮುನಿಯಪ್ಪ (ಚಿಕ್ಕಬಳ್ಳಾಪುರ).— ಮಾನ್ಯ ಗ್ರಾಮಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಮಕ್ಕಳ್ವಮಂತ್ರಿಗಳು ಈ ಕೆಳಕಂಡಪ್ರಶ್ನೆಗಳಿಗೆದಯೆಯಿಟ್ಟು ಉತ್ತರಿಸುವರೇ?

ಅ) ಹೆಸರಾಂತ ಶಿಲ್ಪಿ ಹಾಗೂ ದಕ್ಷ ಆಡಳಿತಗಾರರೆನಿಸಿದ್ದ ದಿವಂಗತ ಮೋಕ್ಷಗುಂಡಂ ಸರ್. ಎಂ. ವಿಶ್ವೇಶ್ವರಯ್ಯನವರ ಜನ್ಮ ಸ್ಥಳವಾದ ಮಂದ್ದೇನಹಳ್ಳಿಯ ಸರ್ವತೋಮುಖ ಅಭಿವೃದ್ಧಿಗಾಗಿ ಸರಕಾರದವರು ಈ ತನಕ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಅಬ್ದುಲ್‌ನಜೀರ್‌ಸಾಬ್ (ಗ್ರಾಮಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

ಅ) ೧) ಗ್ರಾಮಾಂತರ ನೀರು ಸರಬರಾಜು ಯೋಜನೆಯ ಮೂಲಕ ನೀರಿನ ಸೌಕರ್ಯವನ್ನು ಒದಗಿಸಲಾಗಿದೆ.

೨) ತೋಟಗಾರಿಕಾ ಇಲಾಖಾವತಿಯಿಂದ ಸುಂದರವಾದ ಹೊದೋಟವನ್ನು ನಿರ್ಮಿಸಲಾಗಿದೆ.

೩) ಒಂದು ಎಕರೆಯಷ್ಟು ಪ್ರದೇಶದಲ್ಲಿ ತೆಂಗಿನತೋಟವಿದೆ.

೪) ೬ ಎಕರೆ ೧೫ ಗುಂಟೆ ಜಮೀನಿನಲ್ಲಿ ತೆಂಗಿನ ನರ್ಸರಿ ೪.೧೫ ಎಕರೆಗೆ ಹಾಕಲಾಗಿದ್ದು ಉಳಿದ ೨.೧೫ ಎಕರೆ ಜಾಗ ವಶಕ್ಕೆ ಪಡೆದು ಅದರಲ್ಲಿ ಮಾವಿನ ಗಿಡ ನೆಡುವ ಯೋಜನೆಯಿದೆ.

೫) ಲೋಕೋಪಯೋಗಿ ಇಲಾಖೆಯಿಂದ ಚಿಕ್ಕಬಳ್ಳಾಪುರ —ಮೆಳೆಕೋಟೆ ರಸ್ತೆಯಲ್ಲಿ ವಿಶ್ವೇಶ್ವರಯ್ಯ ಸಮಾಧಿಯವರೆಗೆ ೦-೭೭ ಕಿ.ಮೀ.ಗೆ ತಾರು ರಸ್ತೆ ನಿರ್ಮಾಣ ಮಾಡಲಾಗಿದೆ.

೬) ವಿಶ್ವೇಶ್ವರಯ್ಯ ಪ್ರೌಢಶಿಯಂ ಮತ್ತು ಅದರ ಪಕ್ಕದಲ್ಲಿರುವ ಶಾಲೆಗೆ ರೂ. ೨೪೦೦೦-೦೦ ವೆಚ್ಚದಲ್ಲಿ ರಿಪೇರಿ, ಸುಣ್ಣ ಮತ್ತು ಬಣ್ಣ ಬಳಿಯುವ ಕೆಲಸ ಮಾಡಲಾಗಿದೆ.

೭) ಗ್ರಾಮದಿಂದ ಸಮಾಧಿಯವರೆಗೆ ೪ ಬೀದಿ ದೀಪಗಳನ್ನು ಹಾಕಲು ಕ್ರಮ ಕೈಗೊಳ್ಳಲಾಗಿದೆ.